ದಿನಾಂಕಃ **05-12-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಕೆ.ಎಂ.ಆರ್.ರವರಿಂದ ಃ

**1.** ನಾನು ಅನಕ್ಷರಸ್ಥ. ವಾದಿಯ ಸರ್ವೇ ನಂ-268 ರ 24 ಗುಂಟೆಗೆ ದಾವೆ ಹಾಕಿದ್ದಾರೆ. ಸರ್ವೇ ನಂ-268 ರ ಒಟ್ಟು ವಿಸ್ತೀರ್ಣ 1 ಎಕರೆ 28 ಗುಂಟೆ ಇದೆ. ಸರ್ವೇ ನಂ-268 ರ ಒಟ್ಟು ಸ್ವತ್ತು ನಮಗೆ ಸೇರಿದ್ದೆಂದು ತೋರಿಸಲು ದಾಖಲೆ ಕೊಟ್ಟಿದ್ದೇನೆ. ಸಾಕ್ಷಿಯು ದಾವಾ ಸ್ವತ್ತಿಗೆ ಮಾತ್ರ ದಾಖಲೆ ಕೊಟ್ಟಿದ್ದು, ಉಳಿದ ವಿಸ್ತೀರ್ಣಕ್ಕೆ ದಾಖಲೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ-268 ರ ಉಳಿಕೆ 24 ಗುಂಟೆ ಮತ್ತು 20 ಗುಂಟೆಗಳು ನಮಗೆ ಸೇರಿದ್ದು ಎಂದು ತೋರಿಸಲು ದಾಖಲೆಯನ್ನು ಕೊಡಲು ತೊಂದರೆ ಇರಲಿಲ್ಲ. ಸರ್ವೇ ನಂ-268 ರ ಉಳಿಕೆ 24 ಗುಂಟೆ ಮತ್ತು 20 ಗುಂಟೆ ಸ್ವತ್ತುಗಳು ನಮ್ಮ ಹೆಸರಿನಲ್ಲಿ ಇಲ್ಲ, ಆ ಕಾರಣ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ-268/ಪೈ-2 ರ 24 ಗುಂಟೆಗೆ ದಾವೆ ಹಾಕಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನ ಚೆಕ್ಕುಬಂದಿ ಪೂಃ ಕೊಟೇ ತಿಮ್ಮೇಗೌಡರ ಜಮೀನು, ಪಃ ಹಳೆಬೀಡು ಕಾಳೇಗೌಡರ ಜಮೀನು, ಉಃ ತೋಟಗಾರಿಕೆ ಫಾರಂ, ದಃ ಎಲ್. ಕಾಳೇಗೌಡರ ರಾಮೇಗೌಡರ ಜಮೀನು ಎಂದರೆ ಸರಿ. ದಾವಾ ಸ್ವತ್ತು ಸಣ್ಣೇಗೌಡರಿಗೆ ನಿಪಿ-2 ರಂತೆ ದಿಃ05.01.1972 ರ ನೊಂದಾಯಿತ ವ್ಯವಸ್ಥಾ ಪತ್ರದ ಮೂಲಕ ಬಂದಿದೆ ಎಂದರೆ ಸರಿಯಲ್ಲ. ವ್ಯವಸ್ಥಾ ಪತ್ರದ ಆದಾರದ ಮೇಲೆ ವಾದಿಯು 1972 ರಿಂದ ಇಲ್ಲಿಯವರೆಗೂ ಸ್ವತ್ತಿನ ಮಾಲೀಕನಾಗಿ ಕಂದಾಯ ದಾಖಲೆಗಳನ್ನು ಮಾಡಿಸಿಕೊಂಡು ಸ್ವತ್ತಿನ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಿಡಿ-1 ರಿಂದ 4 ಅಸಲು ದಾವಾ ಸಂಖ್ಯೆ-9/2022 ಕ್ಕೆ ಸಂಬಂದಿಸಿದ್ದು, ಸದರಿ ದಾವೆಯ ಸ್ವತ್ತಿನ ಸಂಖ್ಯೆ ಸರ್ವೇ ನಂ-268 ರ 24 ಗುಂಟೆಗೆ ಸಂಬಂದಿಸಿದ್ದು ಎಂದರೆ ಸರಿ. ಅಸಲು ದಾವಾ ಸಂಖ್ಯೆ-9/2022 ರಲ್ಲಿ ಸರ್ವೇ ನಂ-268 ರ ಪೈಕಿ ನಂಬರ್ ಇಲ್ಲ ಎಂದರೆ ಸರಿ. ಅಸಲು ದಾವಾ ಸಂಖ್ಯೆ-9/2022 ರ ದಾವಾ ಸ್ವತ್ತಿನ ಚೆಕ್ಕುಬಂದಿ ಪೂಃ ವಾದಿಯರ ಜಮೀನು, ಪಃ ಚಿಕ್ಕದಾಸೇಗೌಡ ರಾಮೇಗೌಡರ ಜಮೀನು (ಹಾಲಿ ಹಳೇಬೀಡು ಕಾಳೇಗೌಡರ ಜಮೀನು), ಉಃ ತೋಟಗಾರಿಕೆ ಫಾರಂ ಏರಿ, ದಃ ತಮ್ಮಡಯ್ಯನ ಕರಿಗೌಡರ ಜಮೀನು (ಹಾಲಿ ಎಲ್. ಕಾಳೇಗೌಡರ ರಾಮೇಗೌಡರ ಜಮೀನು) ಎಂದರೆ

ಸರಿ. ಅಸಲು ದಾವಾ ಸಂಖ್ಯೆ-9/2022 ರ ಸ್ವತ್ತಿನ ಚೆಕ್ಕುಬಂದಿ ಮತ್ತು ದಾವಾ ಸ್ವತ್ತಿನ ಚೆಕ್ಕುಬಂದಿ ಬೇರೆ ಬೇರೆ ಎಂದರೆ ಸರಿ. ವಾದಿಯು ತಾನು ವ್ಯವಸ್ಥಾ ಪತ್ರದಂತೆ ದಾವಾ ಸ್ವತ್ತನ್ನು ಖಾತೆ ಮಾಡಿಸಿಕೊಂಡಿದ್ದು, ದಾವಾ ಸ್ವತ್ತಿನ ಚೆಕ್ಕುಬಂದಿಯಂತೆ ಸ್ವಾದೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸರ್ವೇ ನಂ-268/ಪೈ-2 ರ 24 ಗುಂಟೆ ಸ್ವತ್ತು ನಮಗೆ ಸೇರಿದ್ದು ಎಂದು ತೋರಿಸಲು ಎಂ.ಆರ್., ಪಹಣಿ, ಕಂದಾಯ ದಾಖಲೆಗಳನ್ನು ಕೊಟ್ಟಿದ್ದೇನೆ. ದಾವಾ ಸ್ವತ್ತು ನನಗೆ ಸೇರಿದ್ದು ಎಂದು ತೋರಿಸಲು ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾದಿಯ ದಾವಾ ಸ್ವತ್ತಿನ ಸ್ವಾದೀನಕ್ಕೆ ನಿರಂತರವಾಗಿ ನವು ಪ್ರತಿವಾದಿಗಳು ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಯಾವುದೇ ದಾಖಲೆಗಳು ಇಲ್ಲದಿದ್ದರು, ದಾವಾ ಸ್ವತ್ತು ನಮ್ಮದೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ. ಹೇ. ಕೇ. ಸ. ಇದೆ.**

**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಸಾಕ್ಷಿದಾರರ ಸಹಿ.** **ಪಾಂಡವಪುರ.**